51 Sri Dharmasthala Manjunatheshwara Ayurvedic Madical College, P.B. No. 164, Thanniruhalla, B.M. Road, Hassan-573201.

52 Bhagavan Mahaveer Jain Ayurvedic Medical College, Gajendra Ghad-582114, Rona Tq., Gadag Dist.

53 Rajeev Ghandhi Ayurvedic Medical College.Ron-582209,Rona-TQ., Gadag Dist.

54 S.B.S Ayurvedic Medical College, Mundaragi-582118, Gadag District.

55 Mahaganapathy Ayurvedic Medical College, Dharwad

56 C.B. Guttal Ayurvedic Medical College, D.C.Compound, Dharwad-590 001.

57 Sri Mallikarjuna Vidya Vardhaka Sanghas Rajeshwari Karpurmath Memorial Ayurvedic Medical College, Bijapura.

1160 (1091) ಶ್ರಿ ತನ್ವೀರ್ ಸೇಠ್ (ನರಸಿಂಹರಾಜ) :– ಮಾನ್ಯ ಕಾರ್ಮಿಕ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಮಾನ್ಯ ಕಾರ್ಮಿಕ ಸಚಿವರು ಸದನದಲ್ಲಿ ಈ ಹಿಂದೆ ಹೇಳಿಕೆ ನೀಡಿದ್ದಂತೆ, ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಅನುಕಂಪದ ಆಧಾರದ ಮೇಲೆ 151 ಮಂದಿ ಅನರ್ಹರಿಗೆ ನೇಮಕಾತಿ ನೀಡಿದ ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ಪದೋನ್ನತಿಯನ್ನು ತನಿಖಾ ವರದಿ ಬರುವವರೆಗೂ ತಡೆಹಿಡಿಯಲಾಗಿದೆಯೇ;

(ಆ) ಸಿ.ಓ.ಡಿ. ತನಿಖಾ ವರದಿಯನ್ನು ಮೂರು ತಿಂಗಳೊಳಗೆ ಪಡೆದು ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಾಗುವುದೆಂದು ಮಾನ್ಯ ಕಾರ್ಮಿಕ ಸಚಿವರು ಸದನದಲ್ಲಿ ಭರವಸೆ ನೀಡಿದ್ದು, ಈ ಬಗ್ಗೆ ತೆಗೆದುಕೊಳ್ಳಲಾದ ಕ್ರಮವೇನು;

(ಇ) ತನಿಖಾ ಸಂಸ್ಥೆಯು ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿದೆಯೇ? ಅಂತಿಮ/ಮಧ್ಯಂತರ ವರದಿ ಸಲ್ಲಿಸಿದ್ದಲ್ಲಿ, ವರದಿಯಾನುಸಾರ ಪ್ರಕರಣದಲ್ಲಿ ಭಾಗಿಯಾಗಿರುವವರ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ;

(ಈ) ವರದಿ ಇನ್ನೂ ಬಾರದಿದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು; ತನಿಖೆ ಪೂರ್ಣಗೊಳ್ಳದೆ ಹಾಗೂ ತನಿಖಾ ವರದಿಯನ್ನು ಪಡೆಯದೆ ತಪ್ಪಿತಸ್ಥ ಅಧಿಕಾರಿಗಳಿಗೆ ಬಡ್ತಿ ನೀಡಲಾಗಿರುವುದೂ ಅಲ್ಲದೆ, ಅದೇ ಸ್ಥಳಗಳಲ್ಲಿ ಮುಂದುವರೆಸಿರುವುದು ನಿಜವೇ;

(ಉ) ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲಾ ಅಧಿಕಾರಿಗಳನ್ನು ಅಮಾನತ್ತುಗೊಳಿಸುವುದರ ಬದಲಿಗೆ, ವಿಚಾರಣೆ ಪೂರ್ಣಗೊಳ್ಳುವ ಮೊದಲೇ ಇವರುಗಳಿಗೆ ಬಡ್ತಿ ನೀಡಿ ಅದೇ ಸ್ಥಳಗಳಲ್ಲಿ ಮುಂದುವರೆಸಿರುವುದೇ ತನಿಖೆ ವಿಳಂಬಗೊಳ್ಳಲು ಪ್ರಮುಖ ಕಾರಣ ಎಂಬುದು ನಿಜವೇ?

ಶ್ರೀ ಇಕ್ಬಾಲ್ ಅನ್ಸಾರಿ (ಮಾನ್ಯ ಕಾರ್ಮಿಕ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು)

(ಅ) ಲಭ್ಯವಿರುವ ಮಾಹಿತಿಯ ಪ್ರಕಾರ ಈ ರೀತಿ ಹೇಳಿಕೆ ನೀಡಿರುವುದಿಲ್ಲ. ಇಲ್ಲ.

(ಆ) 3 ತಿಂಗಳೊಳಗಾಗಿ ವರದಿ ನೀಡುವಂತೆ ಸಿ.ಓ.ಡಿ.ಗೆ ಆದೇಶಿಸಲಾಗಿದೆ. ತನಿಖೆ ಪ್ರಗತಿಯಲ್ಲಿದೆ.

(ಇ) ಇಲ್ಲ.

(ಈ) 151 ಅಭ್ಯರ್ಥಿಗಳ ಪೈಕಿ 140 ಅಭ್ಯರ್ಥಿಗಳನ್ನು ವಿಚಾರಿಸಲಾಗಿದೆ. ಉಳಿದ ಅಭ್ಯರ್ಥಿಗಳನ್ನು ಪತ್ತೆ ಮಾಡಬೇಕಾಗಿರುವುದರಿಂದ ಮತ್ತು ವಿಚಾರಣೆಗೋಸ್ಕರ ಇನ್ನು ಹೆಚ್ಚು ಮಾಹಿತಿ ಸಂಗ್ರಹಿಸಬೇಕಾಗಿರುವುದರಿಂದ ತನಿಖೆ ವಿಳಂಬವಾಗಿದೆ.

ಇಲಾಖೆಯ ಅಧಿಕಾರಿಗಳು ಭಾಗಿಯಾಗಿರುವ ಬಗ್ಗೆ ತನಿಖಾ ವರದಿ ಬಂದಿರುವುದಿಲ್ಲ. ಯಾವುದೇ ಅಧಿಕಾರಿಗಳು ತಪ್ಪಿತಸ್ಥರೆಂದು ವರದಿಯಾಗಿರುವುದಿಲ್ಲದ ಕಾರಣ ಬಡ್ತಿ ನೀಡಿ ರಿಕ್ತ ಸ್ಥಾನಗಳಲ್ಲಿ ಅದೇ ಸ್ಥಳಗಳಲ್ಲಿ ಮುಂದುವರಿಸಲಾಗಿದೆ.

(ಉ) ಇಲ್ಲ

1161 (1092) ಶ್ರಿ ತನ್ವೀರ್ ಸೇತ್ (ನರಸಿಂಹರಾಜ) :– ಮಾನ್ಯ ಕಾರ್ಮಿಕ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಸಿ.ಒ.ಇ. (ಸೆಂಟರ್ ಆಫ್ ಎಕ್ಸಲೆನ್ಸ್) ಅಡಿಯಲ್ಲಿ ಬರುವ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳ ವಿವರಗಳನ್ನು ನೀಡುವುದು;

(ಆ) ಈ ಐ.ಟಿ.ಐ.ಗಳಿಗೆ ಖರೀದಿಸಲಾದ ಯಂತ್ರೋಪಕರಣಗಳ (Tools & Equipments) ವಿವರಗಳನ್ನು ಹಾಗೂ ತಗಲುವ ವೆಚ್ಚದ ವಿವರಗಳನ್ನು ಐಟಂವಾರು ಹಾಗೂ ಐ.ಟಿ.ಐ. ವಾರು ನೀಡುವುದು;